**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನೆಲಮಂಗಲ.**

| ಸಿ.ಸಿ.ನಂಃ **1044** | **/2018** |
|---|---|

ದಿನಾಂಕಃ 01.06.2024 ರಂದು ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಿ.ಡಬ್ಲ್ಯೂ-1

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ.ಎಂ.ಜೆ. ವಕೀಲರಿಂದಃ**

ನಾನು ಪಿಯುಸಿವರೆಗೆ ಓದಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ, ಇಂಗ್ಲೀಷ್ ಅಷ್ಟಾಗಿ ಬರುವುದಿಲ್ಲ. ನಾನು ನೆಲಮಂಗಲದಲ್ಲಿ ವಾಸವಿದ್ದೇನೆ. ನನ್ನ ಮೂಲ ಊರು ಹಾಸನ ಜಿಲ್ಲೆ, ಕಬ್ಬತ್ತಿ ಗ್ರಾಮವಾಗಿರುತ್ತದೆ. ನಾನು ಸುಮಾರು 30 ವರ್ಷಗಳಿಂದ ಕಬ್ಬತ್ತಿ ಗ್ರಾಮ ಬಿಟ್ಟು ನೆಲಮಂಗಲದಲ್ಲಿ ವಾಸವಿದ್ದೇನೆ. ನಾನು ನೆಲಮಂಗಲದಲ್ಲಿ ವಾಸವಿದ್ದು ಪೀಣ್ಯ 2 ನೇ ಹಂತದಲ್ಲಿರುವ ಬಾಟ ಕಂಪನಿಯಲ್ಲಿ ಸುಮಾರು 27 ವರ್ಷಗಳಿಂದ ಕೆಲಸ ಮಾಡಿಕೊಂಡಿದ್ದೇನೆ. ಈಗ 3 ತಿಂಗಳ ಹಿಂದೆ ಬಾಟ ಕಂಪನಿ ಅಲ್ಲಿ ಕ್ಲೋಸ್ ಆಗಿದ್ದು ಈಗ ಯಾವುದೇ ಕೆಲಸ ಮಾಡುತ್ತಿರುವುದಿಲ್ಲ.

ಆರೋಪಿಯು ನನ್ನ ಹೆಂಡತಿಯ ಸ್ನೇಹಿತೆಯ ಸ್ನೇಹಿತೆಯಾಗಿರುತ್ತಾರೆ. ನನ್ನ ಹೆಂಡತಿಯ ಸ್ನೇಹಿತೆಯ ಹೆಸರು ಹೇಮ ಆಗಿರುತ್ತದೆ. ಹೇಮ ಯಾವ ಊರಿನವರು ಎಂದರೆ ಸಾಕ್ಷಿಯು ಅವರು ಹಾಸನ ಜಿಲ್ಲೆಯ ಗವೇನಹಳ್ಳಿಯವರು ಮತ್ತು ಆರೋಪಿಯು ಸಹ ಅದೇ ಊರಿನವರು ಎಂದು ನುಡಿಯುತ್ತಾರೆ. ನಿಮಗೆ ಆರೋಪಿ ಜ್ಯೋತಿಯವರು ಮೊದಲು ಪರಿಚಯವಿರಲಿಲ್ಲ ಎಂದರೆ ಸಾಕ್ಷಿಯು ಹೌದು ಮೊದಲು ಪರಿಚಯವಿರಲಿಲ್ಲ ಎಂದು ನುಡಿಯುತ್ತಾರೆ. 2017 ನೇ ಸಾಲಿನಿಂದ ಆರೋಪಿಯು ನನಗೆ ಪರಿಚಯವಿರುತ್ತಾರೆ. ಹೇಮ ಎನ್ನುವವರು ಗೃಹಿಣಿಯಾಗಿದ್ದು, ಅವರ ಗಂಡ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ, ಅವರ ಹೆಸರು ಗೊತ್ತು,ಆದರೆ ಈಗ ನೆನಪಿಗೆ ಬರುತ್ತಿಲ್ಲ.

2017 ರಲ್ಲಿ ಆರೋಪಿಯು ಕೈಸಾಲದ ವಿಚಾರವಾಗಿ ನನಗೆ ಪರಿಚಯವಾಗಿರುತ್ತಾರೆ. ದಿನಾಂಕಃ 22.01.2018 ರಂದು ಆರೋಪಿಯು ಕೈ ಸಾಲ ಬೇಕೆಂದು ನನ್ನನ್ನು ಕೇಳಿರುತ್ತಾರೆ. ಯಾವುದೇ ಹಣಕಾಸಿನ ವ್ಯವಹಾರ ಮಾಡಬೇಕಾದರೆ ಆ ವ್ಯಕ್ತಿ ಮತ್ತು ಆ ವ್ಯಕ್ತಿಯ ಕುಟುಂಬದ ಹಿನ್ನೆಲೆಯನ್ನು ನೋಡಿ ಮಾಡುತ್ತೇವೆ ಎಂದರೆ ಸರಿ. ಆ ರೀತಿ ನೀವು ಆರೋಪಿಯ ಹಿನ್ನೆಲೆಯನ್ನು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಾನು ಈ ನ್ಯಾಯಾಲಯದಲ್ಲಿ ಈ ಪ್ರಕರಣವನ್ನು ಹೊರತುಪಡಿಸಿ ನಾನು ಯಾವುದೇ ಪ್ರಕರಣ

ಹಾಕಿರುವುದಿಲ್ಲ. ನಾನು ಈಗ ಯಾವುದೇ ಬ್ಯಾಂಕ್ ನಲ್ಲಿ ಸಾಲ ಪಡೆದುಕೊಂಡಿರುವುದಿಲ್ಲ. ನಾನು 2017-18 ರಲ್ಲಿ ಒಂದು ಬ್ಯಾಂಕ್ ನಿಂದ ಸಾಲ ಪಡೆದುಕೊಂಡಿದ್ದೇನೆ, ಅದನ್ನು ತೀರುವಳಿ ಮಾಡಿರುತ್ತೇನೆ. 2017-18 ನೇ ಸಾಲಿನಲ್ಲಿ ಹಣಕಾಸಿನ ತೊಂದರೆ ಇದ್ದರಿಂದ ಸಾಲ ಮಾಡಿದ್ದೀರಾ ಎಂದರೆ ಸಾಕ್ಷಿಯು ನನ್ನ ಹೆಂಡತಿಗೆ ಆರೋಗ್ಯ ಸರಿಯಲ್ಲದ ಕಾರಣ ಸಾಲ ಮಾಡಿದ್ದೇನೆ ಎಂದು ನುಡಿಯುತ್ತಾರೆ. ನಿಮಗೆ ಆಗ ಹಣವಿಲ್ಲದ ಕಾರಣ ಸಾಲ ಮಾಡಿದ್ದೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಮಗೆ ಬಾಟಾ ಕಂಪನಿಯ ಉದ್ಯೋಗದ ಸಂಬಳ ಬಿಟ್ಟರೆ ಆದಾಯ ಉದ್ಯೋಗ ಇರಲಿಲ್ಲ ಎಂದರೆ ಸಾಕ್ಷಿಯು ಆಗ ಒಂದು ಅಂಗಡಿ ನಡೆಸುತ್ತಿದ್ದೆ ಅದರಿಂದ ಆದಾಯ ಬರುತ್ತಿತ್ತು ಎಂದು ನುಡಿಯುತ್ತಾರೆ. ಬಾಟಾ ಕಂಪನಿಗೆ ಹೋಗುವಾಗ ಅಂಗಡಿ ಇತ್ತಾ ಎಂದರೆ 2017-18 ನೇ ಸಾಲಿನಲ್ಲಿ ಅಂಗಡಿ ಇತುತ ಎಂದು ನುಡಿಯುತ್ತಾರೆ. ಅಂಗಡಿ ವ್ಯವಹಾರವನ್ನು ನನ್ನ ಹೆಂಡತಿ ನೋಡಿಕೊಳ್ಳುತ್ತಿದ್ದಳು, ಫ್ರೀ ಇದ್ದಾಗ ನಾನು ನೋಡಿಕೊಳ್ಳುತ್ತಿದ್ದೆ.

ಬಾಟಾ ಕಂಪನಿಯಲ್ಲಿ ನಾನು ಬೆಳಿಗ್ಗೆ 6 ರಿಂದ 2 ಅಥವಾ 2 ರಿಂದ 10 ಅಥವಾ ರಾತ್ರಿ 10 ರಿಂದ ಬೆಳಿಗ್ಗೆ 6 ರವರೆಗೆ ಒಂದು ಪಾಳಿಯಲ್ಲಿ ಕೆಲಸ ಮಾಡುತ್ತಿದ್ದೆ. ನನಗೆ ಬಾಟಾ ಕಂಪನಿಯಿಂದ ತಿಂಗಳಿಗೆ 35,000/- ಸಂಬಳ ಬರುತ್ತಿತ್ತು. ನಮ್ಮ ಅಂಗಡಿಯಿಂದ 15,000/- ಹಣ ಬರುತ್ತಿತ್ತು. ನಾನು 5 ವರ್ಷದ ಹಿಂದೆ ನಾಗರಬಾವಿಯಲ್ಲಿ ವಾಸವಿದ್ದಾಗ ಅಂಗಡಿ ನಡೆಸುತ್ತಿದ್ದು ಅಂಗಡಿ ನಡೆಸಲು ಪರವಾನಿಗೆಯನ್ನು ಪಡೆದುಕೊಂಡಿದ್ದೆ. ಸದರಿ ಪರವಾನಿಗೆ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ತೊಂದರೆ ಇಲ್ಲ, ಆದರೆ ಅದು ಈಗ ನಮ್ಮ ಬಳಿ ಇಲ್ಲ ಎಂದು ನುಡಿಯುತ್ತಾರೆ.

ನಾನು ಈಗ ಬಾಡಿಗೆ ಮನೆಯಲ್ಲಿ ವಾಸವಿದ್ದೇನೆ ಮತ್ತು ಮಾಸಿಕ ಬಾಡಿಗೆ 6,500 ಇರುತ್ತದೆ. ನನಗೆ ಇಬ್ಬರು ಮಕ್ಕಳಿದ್ದು ಅವರು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅಂಗಡಿಯ ಆದಾಯ ಮತ್ತು ಬಾಟಾ ಕಂಪನಿಯಿಂದ ಬರುವ ಸಂಬಳದ ಹಣ ನಿಮಗೆ ಸಾಕಾಗುತ್ತಿತ್ತು ಎಂದರೆ ಹೌದು ಎಂದು ನುಡಿಯುತ್ತಾರೆ. ಸದರಿ ಆದಾಯ ನಿಮ್ಮ ಕುಟುಂಬದ ನಿರ್ವಹಣೆಗೆ ಪೂರ್ತಿ ಖರ್ಚಾಗುತ್ತಿತ್ತು ಎಂದರೆ ಅಲ್ಪ-ಸ್ವಲ್ಪ ಉಳಿಯುತ್ತಿತ್ತು ಎಂದು ನುಡಿಯುತ್ತಾರೆ. 2017 ರಲ್ಲಿ ನನ್ನ ಮಕ್ಕಳು ನಾಗರಬಾವಿಯಲ್ಲಿ ಓದುತ್ತಿದ್ದರು. ಆ ಸಮಯದಲ್ಲಿ ಒಬ್ಬರಿಗೆ 35,000/- ಮತ್ತೊಬ್ಬರಿಗೆ 45,000/- ಶಾಲಾ ಶುಲ್ಕ ಪಾವತಿಸಿರುತ್ತೇನೆ. ಮಕ್ಕಳ ವಿದ್ಯಾಭಾಸಕ್ಕೆ ಮಾಸಿಕವಾಗಿ ಯಾವುದೇ ಹಣ ಪಾವತಿಸುತ್ತಿರಲಿಲ್ಲ. ವಾರ್ಷಿಕವಾಗಿ ಮಕ್ಕಳ ವಿಧ್ಯಾಭಾಸಕ್ಕೆ 2 ಲಕ್ಷ ಖರ್ಚಾಗುತ್ತಿತ್ತಾ ಎಂದರೆ ಸುಮಾರು 1,50,000/- ಖರ್ಚಾಗುತ್ತಿತ್ತು ಎಂದು ನುಡಿಯುತ್ತಾರೆ. ನಾನು ಆರ್ಥಿಕವಾಗಿ ಸದೃಡವಾಗಿಲ್ಲ ಎಂದರೆ ಸಾಕ್ಷಿಯು ಅಷ್ಟೊಂದು ಸದೃಢವಾಗಿಲ್ಲ ಎಂದು ನುಡಿಯುತ್ತಾರೆ. ನಾನು ಬೇರೆಯವರಿಗೆ ಸಾಲ ಕೊಡುವಷ್ಟು

ಆರ್ಥಿಕವಾಗಿ ಸದೃಡವಾಗಿಲ್ಲ ಎಂದರೆ ಸಾಕ್ಷಿಯು ನಾನು ಹಣ ಕೇಳಿದಾಗ ಕೊಟ್ಟಿದ್ದೇನೆ, ಈಗ ಕಳೆದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ಸರ್ಕಾರದಿಂದ ನಮ್ಮ ಕುಟುಂಬ ಪಡಿತರ ಸೌಲಭ್ಯ ಪಡೆಯುತ್ತಿದ್ದು, ಬಿ.ಪಿ.ಎಲ್ ಸೌಲಭ್ಯ ಇದೆ ಎಂದರೆ ಸರಿ.

ಆರೋಪಿಯು ನನ್ನ ಬಳಿ ಬಂದು ಕೈಸಾಲವಾಗಿ ಹಣ ಕೇಳಿರುತ್ತಾರೆ. ದೂರಿನಲ್ಲಾಗಲೀ ಅಥವಾ ನೋಟೀಸಿನಲ್ಲಾಗಲಿ ಆರೋಪಿಯು ಬಂದು ಕೈಸಾಲ ಎಂದು ಬರೆಸಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಯಾವಾಗ ಹಣ ನೀಡಿದ್ದೀರಾ ಎಂದರೆ ಸಾಕ್ಷಿಯು 22.01.2018 ರಲ್ಲಿ 1,50,000/- ಮತ್ತು 02.05.2018 ರಂದು 50,000/- ಹಣವನ್ನು ಆರೋಪಿಗೆ ನೀಡಿರುತ್ತೇನೆ. ಹಣವನ್ನು ಎಲ್ಲಿಂದ ತಂದುಕೊಟ್ಟಿದ್ದೀರಿ ಎಂದರೆ ಅಲ್ಪ ಸ್ವಲ್ಪ ಉಳಿಸಿದ ಹಣ ಮತ್ತು ಚೀಟಿ ಹಾಕಿದ ಹಣವನ್ನು ಆರೋಪಿಗೆ ನೀಡಿದ್ದೇನೆ ಎಂದು ನುಡಿಯುತ್ತಾರೆ. ನಾನು ಚೀಟಿಯನ್ನು ಕಟ್ಟಾಯ ಎಂಬ ಗ್ರಾಮದಲ್ಲಿ ಹಾಕಿದ್ದೇನೆ. ಸದರಿ ಚೀಟಿಗೆ ಮಾಸಿಕ 6,000/- ಹಣ ಪಾವತಿ ಮಾಡುತ್ತಿದ್ದೆನು, ಸುಮಾರು 32-35 ಜನ ಸದಸ್ಯರಿದ್ದರು, ಸದರಿ ಚೀಟಿಯನ್ನು ಮಹೇಶ್ ಎಂಬುವವರು ನಡೆಸುತ್ತಿದ್ದರು. ಮಹೇಶ್ ರವರು ಚೀಟಿ ನಡೆಸಲು ಪರವಾನಿಗೆ ಪಡೆದಿರುವುದಿಲ್ಲ. 20.01.2018 ರಂದು ಚೀಟಿ ಹಣವನ್ನು ಪಡೆದುಕೊಂಡಿರುತ್ತೇನೆ. ಚೀಟಿ ಹಣ ಪಡೆದುಕೊಂಡಾಗ ನಿಮ್ಮಿಂದ ದಾಖಲೆ ಪಡೆಯುತ್ತಾರಾ ಎಂದರೆ ಸಾಕ್ಷಿಯು ಚೆಕ್ ಪಡೆದುಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ನಾನು ಚೀಟಿಯಿಂದ ಹಣ ಪಡೆದುಕೊಂಡಿರುವುದಾಗಿ ನೋಟೀಸು ಮತ್ತು ದೂರಿನಲ್ಲಿ ಬರೆಸಿರುವುದಿಲ್ಲ.

ಆರೋಪಿಗೆ ಹಣ ನೀಡಿದಾಗ ದಾಖಲೆ ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿಯು ಹೇಮರವರು ಪರಿಚಯಸ್ಥರಾದ ಕಾರಣ ಪರಿಚಯದಲ್ಲಿ ಹಣ ನೀಡಿದ್ದೇನೆ, ದಾಖಲೆ ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ. ನಾನು ಹಣವನ್ನು ಆರೋಪಿಗೆ ಹೇಮರವರ ಮನೆಯಲ್ಲಿ ನೀಡಿದ್ದೇನೆ. ಆರೋಪಿಗೆ ಹಣವನ್ನು ನೀಡುವ ಕಾಲಕ್ಕೆ ಹೇಮರವರು ಮತ್ತು ನನ್ನ ಹೆಂಡತಿ ಇದ್ದರು, ಮತ್ತಾರು ಇರಲಿಲ್ಲ. ಚೀಟಿ ಹಣ ಪಡೆದ ವಿಚಾರಕ್ಕೆ ದಾಖಲೆ ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿಯು ಅವರು ಸಂಬಂಧದಲ್ಲಿ ಚೀಟಿ ನಡೆಸುತ್ತಿದ್ದು ಯಾವುದೇ ದಾಖಲೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯ ಗಂಡನ ಹೆಸರು ದಿನೇಶ್ , ಆರೋಪಿಯ ತಂದೆ ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ಹಣ ನೀಡಿದ ದಿನ ಯಾವುದೇ ಬರವಣಿಗೆ ದಾಖಲೆಯಾಗಿರುವುದಿಲ್ಲ. ಹೇಮಾರವರನ್ನು ಈ ಪ್ರಕರಣದಲ್ಲಿ ಕರೆದುಕೊಂಡು ಬಂದು ವಿಚಾರಣೆ ಮಾಡಿಸುತ್ತೀರಾ ಎಂದರೆ ಸಾಕ್ಷಿಯು ಈಗ ಅವರಿಗೂ ನಮಗೂ ಮಾತುಕತೆ ಇಲ್ಲ, ಅವರು ಬರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಯಾವುದೇ ಚೀಟಿ ಹಾಕಿರಲಿಲ್ಲ ಮತ್ತು ಚೀಟಿ ಹಣ ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಬುಕ್ ನಲ್ಲಿ ನನ್ನ ಹೆಸರನ್ನು ಬರೆದುಕೊಂಡ ಬಗ್ಗೆ ಮತ್ತು ನಾನು ಚೀಟಿಯ ಕಂತಿನ ಹಣವನ್ನು ಅವರಿಗೆ ಕಳುಹಿಸಿದ ಬಗ್ಗೆ ಬೇಕಾದರೆ ದಾಖಲೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

ನನ್ನ ಹೆಂಡತಿಯ ಹೆಸರು ಭಾಗ್ಯ ಸಿ.ಎಸ್ ಎಂದರೆ ಸರಿ. ನನ್ನ ಹೆಂಡತಿ ಭಾಗ್ಯರವರು ಹೇಮನ ಗಂಡ ಪೊಲೀಸ್ ರಘುರವರು ಆರೋಪಿಯ ಬಳಿ ಜಮೀನಿನ ವಿಚಾರವಾಗಿ ವ್ಯವಹಾರ ಮಾಡಲು ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನ ವಿಚಾರವಾಗಿ ನನ್ನ ಹೆಂಡತಿ ಭಾಗ್ಯ ಆರೋಪಿಗೆ ಹಣ ನೀಡಿದ್ದರು ಮತ್ತು ನಾನು ಯಾವುದೇ ಹಣವನ್ನು ಆರೋಪಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ನನ್ನ ಹೆಂಡತಿ ಮತ್ತು ಹೇಮರವರ ಸಮಕ್ಷಮ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ. ದಾಖಲಾತಿ ವ್ಯವಹಾರ ಯಾವಾಗ ನಡೆಯಿತು ಎಂದರೆ ಸಾಕ್ಷಿಯು ಆರೋಪಿಯು ಆ ದಿನವೇ ಚೆಕ್ಕನ್ನು ನೀಡಿದ್ದರು, ಆದರೆ ಆ ಚೆಕ್ಕು ಹೇಮರವರ ಬಳಿ ಇತ್ತು. ಆ ಚೆಕ್ಕನ್ನು ನೀವು ಯಾವಾಗ ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿಯು ಆ ಚೆಕ್ಕನ್ನು ನಾನು 15 ದಿನಗಳ ನಂತರ ಪಡೆದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನೋಟೀಸಿನಲ್ಲಾಗಲೀ, ಪಿರ್ಯಾದಿನಲ್ಲಾಗಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಸದರಿ ಚೆಕ್ಕನ್ನು ನಾನು ಸುಮಾರು 15 ದಿನ ನನ್ನ ಬಳಿ ಇಟ್ಟುಕೊಂಡಿದ್ದೆ. ಆರೋಪಿಯು ಯಾವ ದಿನಾಂಕದಂದು ನಿಮಗೆ ಚೆಕ್ಕನ್ನು ನೀಡಿದ್ದಾರೆ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯತ್ತಾರೆ. ನಾನು ಚೆಕ್ಕನ್ನು 22.01.2018 ರಂದು ನಗದೀಕರಣಕ್ಕಾಗಿ ಬ್ಯಾಂಕ್ ಗೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಚೆಕ್ಕಿಗೆ ಯಾವ ಭಾಷೆಯಲ್ಲಿ ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಕನ್ನಡ ಭಾಷೆಯಲ್ಲಿ ಸಹಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಚೆಕ್ ನಲ್ಲಿರುವ ಸಹಿಗೂ ಮತ್ತು ಇತರ ಬರವಣಿಗೆಗೂ ವ್ಯತ್ಯಾಸವಿದೆ ಎಂದರೆ ಸರಿ. ಆರೋಪಿಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ ಎಂದರೆ ಸಾಕ್ಷಿಯು ಚೆಕ್ ಬರವಣಿಗೆಯನ್ನು ಹೇಮರವರು ಮಾಡಿದ್ದರು, ಚೆಕ್ಕಿಗೆ ಸಹಿಯನ್ನು ಮಾತ್ರ ಆರೋಪಿಯು ಮಾಡಿದ್ದಾರೆ ಎಂದು ನುಡಿಯುತ್ತಾರೆ. ಹೇಮರವರು ಐ.ಟಿ.ಐ ಓದಿದ್ದಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.**

**(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)**

ಓ ಹೇ ಕೇ ಸ ಇದೆ

**|ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನೆಲಮಂಗಲ.**